ಬೆಳಗಾವಿ	ಬಾಗಲಕೋಟ	ವಿಜಯಪುರ	ಹುಬ್ಬಳಿ	ಧಾರವಾಡ	ಕೊಪ್ಪಳ	ಕಾರವಾರ	ಹಾವೇರಿ
ಮೋಡ ಕವಿದ ಇರಲಿದೆ	ಮೋಡ ಕವಿದ ವಾತಾವರಣ	ಬಿಸಿಲು ಉಷ್ಣಾಂಶ ಇರಲಿದೆ	ಮೋಡ ಕವಿದ ವಾತಾವರಣ ಇರಲಿದೆ	ಮೋಡ ಕವಿದ ವಾತಾವರಣ	ಮೋಡ ಕವಿದ ವಾತಾವರಣ	ಮೋಡ ಕವಿದ ವಾತಾವರಣ	ಮೋಡ ಕವಿದ ವಾತಾವರಣ
29/19°C	31/22°C	33/20°C	30/21°C	30/20°C	29/21°C	31/25°C	29/22°C

ಸಾಹಸ ನಿರ್ದೇಶಕ ರವಿವರ್ಮ ನಿರ್ದೇಶನದಲ್ಲಿ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅಭಿನಯದ 'ರುಸ್ತುಂ' ಸಿನಿಮಾ ಶೂಟಿಂಗ್ ಹೈದರಾಬಾದ್‌ನಲ್ಲಿ ನಡೆಯಲಿದೆ. ಇಂದು ಬೆಳಗ್ಗೆ ಚಿತ್ರತಂಡ ಹೈದರಾಬಾದ್‌ಗೆ ಪ್ರಯಾಣ ಬೆಳೆಸಿದೆ.

ರೋಹಿತ್ ನಾಯಕನಾದ್ರು ಧೋನಿ ಪಾತ್ರ ಪ್ರಮುಖವಾಗಿರಲಿದೆ: ಶಾಸ್ತಿ

'ಕಿನಾರೆ' ಚಿತ್ರಕ್ಕಾಗಿ ಕನ್ನಡ ರ‍್ಯಾಪರ್ ಚಂದನ್ ಶೆಟ್ಟಿ ಹಾಗೂ ಕೌಶಿಕ್ ಹರ್ಷ ಹಾಡಿರುವ 'ಹೋಯ್ತಲ್ಲೋ ಕೋಳಿ ಓಡಿ ಹೋಯ್ತಲ್ಲೋ' ವಿಡಿಯೋ ಸಾಂಗ್ ಬಿಡುಗಡೆಯಾಗಿದೆ. ಕೇಳೋದಕ್ಕೆ ಸಖತ್ ಕ್ಯಾಚಿಯಾಗಿರೋ ಈ ಹಾಡು ನೋಡಲು ಕೂಡಾ ಅಷ್ಟೇ ಚೆನ್ನಾಗಿದೆ.

ಭಾರತ ಪಾಕ್ ಸೆಣಸಾಟಕ್ಕೆ ಕಾದು ಕುಳಿತ ಅಭಿಮಾನಿಗಳು

ಪ್ರತಿ ಬಾರಿ ಡಾ. ವಿಷ್ಣುವರ್ಧನ್ ಅಭಿಮಾನಿಗಳು ಸೆಪ್ಟೆಂಬರ್ 18 ರಂದು ಅವರ ಹುಟ್ಟುಹಬ್ಬವನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಈ ಬಾರಿ ವಿಷ್ಣು ಬರ್ತಡೇಯನ್ನು ವಿಶೇಷವಾಗಿ ಆಚರಿಸಲು ಡಾ. ವಿಷ್ಣುವರ್ಧನ್ ಸೇನಾ ಸಮಿತಿ ಪ್ಲಾ ್ಯನ್ ಮಾಡಿದೆ.

ಏಷ್ಯಾಕಪ್‌ನಿಂದ ಹೊರಗುಳಿದ ಬಾಂಗ್ಲಾ ಆಟಗಾರ ತಮೀಮ್

ಕಿರಿಯರ ಅದ್ಭುತ ಸಾಧನೆ

ಗ್ಲಿವಿಸ್: ಪೋಲಾಂಡ್‌ನಲ್ಲಿ ನಡೆದ 13ನೇ ಸಿಲೆಸಿಯಾನ್ ಓಪನ್ ಬಾಕ್ಸಿಂಗ್ ಟೂರ್ನಮೆಂಟ್‌ನಲ್ಲಿ ಭಾರತೀಯ ಸೀನಿಯರ್ ಹಾಗೂ ಜ್ಯೂನಿಯರ್ ಬಾಕ್ಸಿಂಗ್ ಪಟುಗಳು ಅದ್ಭುತ ಸಾಧನೆ ಮಾಡಿದ್ದಾರೆ. ಜ್ಯೂನಿಯರ್ ಸ್ಪರ್ಧೆಯಲ್ಲಿ 6 ಚಿನ್ನ, 6 ಬೆಳ್ಳಿ ಹಾಗೂ ಒಂದು ಕಂಚು ಗೆದ್ದಿರುವುದು ವಿಶೇಷ.

ಖ್ಯಾತ ಬಾಕ್ಸಿಂಗ್ ಪಟು ಮೆರಿಕೋಮ್ 48 ಕೆಜಿ ಹಿರಿಯರ ವಿಭಾಗದಲ್ಲಿ ಕಝಾಕಿಸ್ತಾನದ ಐಗೆರಿಮ್ ಕಸ್ಸಾನಯೆವಾರನ್ನು 5–0 ಅಂತರದಿಂದ ಮಣಿಸಿ ಸ್ವರ್ಣ ಪದಕಕ್ಕೆ ಮುತ್ತಿಟ್ಟರು. ಈ ಮೂಲಕ ಈ ವರ್ಷದಲ್ಲಿ ಮೂರು ಬಂಗಾರದ ಪದಕಗಳನ್ನು ಕೊರಳಿಗೇರಿಸಿಕೊಂಡ ಕೀರ್ತಿಗೂ ಭಾಜನರಾದರು. ಇದಕ್ಕೂ ಮೊದಲು ದೆಹಲಿಯಲ್ಲಿ ನಡೆದ ಇಂಡಿಯಾ ಓಪೆನ್ ಹಾಗೂ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದು, ಗೆಲುವಿನ ನಗೆ ಬೀರಿದ್ದರು.

54 ಕೆಜಿ ವಿಭಾಗದಲ್ಲಿ ಭಾರತದ ಮನಿಶಾ ಬೆಳ್ಳಿ ಗೆದ್ದು ಸಂಭ್ರಮಿಸಿದರು. ಅಂತೆಯೇ ಎಲ್. ಸರಿತಾದೇವಿ (60ಕೆಜಿ), ರಿತು ಗ್ರೆವಾಲ್ (51ಕೆಜಿ) ಲೊವ್ಲಿನ ಬೊರ್ಗೊಹೈನ್ (69 ಕೆಜಿ) ಹಾಗೂ ಪೂಜಾ ರಾಣಿ (81ಕೆಜಿ) ಅವರು ಕಂಚು ಗೆದ್ದು, ಭಾರತಕ್ಕೆ ಕೀರ್ತಿ ತಂದರು. ವರ್ಲ್ಡ್ ಚಾಂಪಿಯನ್ ಜ್ಯೋತಿ ಗುಲಿಯಾ (51ಕೆಜಿ) ಮಾತ್ರ ಅರ್ಜೆಂಟೈನಾದಲ್ಲಿ ಮುಂದಿನ ತಿಂಗಳು ನಡೆಯುವ ಯೂತ್ ಒಲಂಪಿಕ್ ಗೇಮ್ಸ್‌ಗೆ ಆಯ್ಕೆಯಾಗಿದ್ದಾರೆ.

ಕಣ್ಸನ್ನೆ ಹುಡುಗಿಗೆ ಹುಟ್ಟಿಕೊಂಡಿದ್ದಾಳೆ ಪ್ರತಿಸ್ಪರ್ಧಿ !

ತನ್ನ ಕಣ್ಸನ್ನೆಯಿಂದ ಇಡೀ ದೇಶದ ಯುವಕರ ಎದೆಬಡಿತ ಹೆಚ್ಚಿಸಿ ಸೆನ್ಸೇಶನ್ ಸೃಷ್ಟಿಸಿದ ಪ್ರಿಯಾ ಪ್ರಕಾಶ್ ವಾರಿಯರ್‌ಗೆ ಈಗ ಪ್ರತಿಸ್ಪರ್ಧಿಯೊಬ್ಬಳು ಹುಟ್ಟಿಕೊಂಡಿದ್ದಾಳೆ.

ನಟಿ ದಿಶಾ ಪಟಾನಿ ಈಗ ಮುಂಬರುವ ಜಾಹೀರಾತಿಗಾಗಿ ಪ್ರಿಯಾಳ ಕಣ್ಸನ್ನೆಯನ್ನು ಅನುಕರಿಸಿದ್ದಾಳೆ. ದಿಶಾಳ ಕಣ್ಸನ್ನೆಯ ಸ್ಟಿಲ್ ಇಂಟರ್ನೆಟ್‌ನಲ್ಲಿ ಓಡಾಡತೊಡಗಿದೆ. ಈ ಸ್ಟಿಲ್‌ನಲ್ಲಿ ಸೇಮ್ ಟು ಸೇಮ್ ಪ್ರಿಯಾಳನ್ನೇ ದಿಶಾ ಕಾಪಿ ಮಾಡಿದ್ದಾಳೆ. ಅದೇ ಶಾಲೆ ಸಮವಸ್ತ್ರ, ಹೇರ್ ಸ್ಟೈಲ್‌ನೊಂದಿಗೆ ಕಾಣಿಸಿಕೊಂಡ ದಿಶಾ ಒಂದು ಕಣ್ಣು ಮುಚ್ಚಿದ್ದಾಳೆ.

ಮಲಯಾಳಿ ನಟಿ ಪ್ರಿಯಾ, ತನ್ನ 'ಒರು ಅಡಾರ್ ಲವ್' ಚಿತ್ರದ ಹಾಡೊಂದರ ದೃಶ್ಯದಲ್ಲಿ ಕಣ್ಸನ್ನೆಯ ದೃಶ್ಯದಲ್ಲಿ ಕಾಣಿಸಿಕೊಂಡಿದ್ದಳು. ಆ ದೃಶ್ಯ ರಾತ್ರೋರಾತ್ರಿ ಕೋಟ್ಯಂತರ ಜನರ ಮನಗೆದ್ದು ಪ್ರಿಯಾ ಸ್ಟಾರ್ ಆಗಿ ಹೊರಹೊಮ್ಮಿದ್ದಳು. ಚಿತ್ರ ಬಿಡುಗಡೆಯಾಗುವ ಮುನ್ನವೇ ಟಿವಿ ಜಾಹೀರಾತು ಹಾಗೂ ಸಿನಿಮಾಗಳಲ್ಲಿ ಅವಕಾಶ ಗಿಟ್ಟಿಸಿಕೊಂಡಿದ್ದಳು. ಇತ್ತ ದಿಶಾ ಈಗಷ್ಟೇ ಸಲ್ಮಾನ್ ಖಾನ್ ಜೊತೆ 'ಭಾರತ್' ಚಿತ್ರದ ಶೂಟಿಂಗ್ ಮುಗಿಸಿದ್ದಾಳೆ. ಭಾಗಿ 2 ಚಿತ್ರದಲ್ಲೂ ಈಕೆ ನಟಿಸಿದ್ದಳು.

ವಿರಾಟ್ ಕೊಹ್ಲಿ ಇಲ್ಲದ ಏಷ್ಯಾಕಪ್

ತಂಡಕ್ಕೆ ಬೇಕಿದೆ ಕೂಲ್ ಎಂಎಸ್ ಧೋನಿಯ ಸಲಹೆ

ದುಬೈ: ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಹಿನ್ನೆಲೆಯಲ್ಲಿ ಟೀಂ ಇಂಡಿಯಾ ಇದೇ ತಿಂಗಳ 18 ರಿಂದ ದುಬೈನಲ್ಲಿ ನಡೆಯಲಿರುವ ಏಷ್ಯಾಕಪ್ ಟೂರ್ನಿ ಮಹತ್ವದ ಪಾತ್ರ ವಹಿಸಲಿದೆ. ಕೊಹ್ಲಿ ಗೈರಿನಲ್ಲಿ ನಡೆಯಲಿರುವ ಈ ಟೂರ್ನಿಯಲ್ಲಿ ಉಪನಾಯಕ ರೊಹಿತ್? ಶರ್ಮಾ ತಂಡವನ್ನು ಮುನ್ನಡೆಸಲಿದ್ದಾರೆ.

ಟೂರ್ನಿಯಲ್ಲಿ ಟೀಮ್ ಇಂಡಿಯಾ ಹಾಟ್ ಫೇವರೆಟ್ ಆಗಿದ್ದರೂ ಕೂಡ ಉಳಿದ ತಂಡಗಳನ್ನು ಕಡೆಗಣಿಸುವಂತಿಲ್ಲ. ಪಾಕಿಸ್ತಾನ, ಬಾಂಗ್ಲಾದೇಶ, ಅಫ್ಘಾನಿಸ್ತಾನ ತಂಡಗಳು ಯಾವ ಕ್ಷಣದಲ್ಲಾದರೂ ಪಂದ್ಯದ ಫಲಿತಾಂಶವನ್ನು ತಮ್ಮ ಪರವಾಗಿ ತಿರುಗಿಸಬಲ್ಲ ಸಾಮರ್ಥ್ಯ ಹೊಂದಿವೆ. ಹಾಗಾಗಿ ಟೀಮ್ ಇಂಡಿಯಾ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ತೊರುವಲ್ಲಿ ಟೀಮ್ ಇಂಡಿಯಾದ ಸ್ಟಾರ್ ಆಟಗಾರ, ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಅವರ ಸಲಹೆ ಸೂಚನೆಗಳು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸಲಿದೆ ಎಂದರೆ ತಪ್ಪಾಗಲಾರದು.

ಧೋನಿ ತಂಡದ ನಾಯಕನಾಗಿದ್ದಾಗ ತೆಗೆದುಕೊಳ್ಳುತ್ತಿದ್ದ ನಿರ್ಧಾರಗಳಿಂದ ಪಂದ್ಯದ ಫಲಿತಾಂಶವೇ ಬದಲಾಗುತ್ತಿತ್ತು. ನಂತರದಲ್ಲಿ ಕೊಹ್ಲಿ ನಾಯಕನಾದ ಮೇಲೂ ಧೋನಿಯಿಂದ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳುತ್ತಿದ್ದರು ಎಂಬುದು ಎಲ್ಲರಿಗೂ ಗೊತ್ತೇ ಇದೆ. ಈಗ ಮುಂಬರಲಿರುವ ಏಷ್ಯಾ ಕಪ್‌ನಲ್ಲಿ ಧೋನಿ ಮರಳಿ ತಮ್ಮ ತಂಡದ ಪರೋಕ್ಷ ನಾಯಕನಾಗಿ ಪಾತ್ರ ನಿಭಾಯಿಸಬೇಕಾದ ಜವಾಬ್ದಾರಿಯನ್ನು ಹೊರಬೇಕಾಗಿದೆ. ಧೋನಿಯವರ ಮಾರ್ಗದರ್ಶನದಲ್ಲಿ ತಂಡ ಉತ್ತಮ ಪ್ರದರ್ಶನ ತೊರುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಹೊಸ ನಿಯಮ

ದುಬೈ: ಈಗಾಗಲೇ ಐಸಿಸಿಯಿಂದ ಆಯೋಜಿಸಲ್ಪಡುವ ಎಲ್ಲ ಟೂರ್ನಿಗಳಲ್ಲಿ ಉಭಯ ದೇಶಗಳ ನಡುವಿನ ಪಂದ್ಯ ಟೈ ಆದಾಗ, ಸೂಪರ್ ಓವರ್ ನಡೆಸುವ ಮೂಲಕ ಒಂದೇ ತಂಡ ಗೆಲುವು ಸಾಧಿಸುವಂತೆ ಮಾಡುವ ಯೋಜನೆ ಜಾರಿಯಲ್ಲಿದೆ.

ಈ ನಿಯಮ ಇಲ್ಲಿಯವರೆಗೂ ಏಷ್ಯಾಕಪ್‌ನಲ್ಲಿ ಜಾರಿಯಾಗಿರಲಿಲ್ಲ. ಆದರೆ ಈ ಬಾರಿ ಏಷ್ಯಾಕಪ್‌ನಲ್ಲಿ ಸೂಪರ್ ಓವರ್ ಜಾರಿಗೊಳಿಸಲು ನಿರ್ಧರಿಸಲಾಗಿದೆ ಎಂದು ತಿಳಿದು ಬಂದಿದೆ. ಈ ಹಿಂದೆ ಎರಡು ತಂಡಗಳ ನಡುವಿನ ಪಂದ್ಯ ಟೈ ಆದಾಗ ಜಂಟಿ ಜಯಶಾಲಿ ಅಥವಾ ಲೀಗ್ ಪಂದ್ಯಗಳಲ್ಲಿ ಈ ರೀತಿ ನಡೆದಾಗ ಉಭಯ ತಂಡಗಳಿಗೆ ಸಮನಾದ ಅಂಕ ನೀಡುವ ಪದ್ಧತಿ ಏಷ್ಯಾಕಪ್‌ನಲ್ಲಿ ಜಾರಿಯಲ್ಲಿದೆ.

ಪಂದ್ಯ ಡ್ರಾ ಆದರೆ ಎರಡು ತಂಡಗಳಿಗೆ ಸಮಾನವಾದ ಅಂಕ ನೀಡುವ ಬದಲಿಗೆ ಸೂಪರ್? ಓವರ್ ಆಡಿಸಿ, ಕೇವಲ ಒಂದೇ ತಂಡವನ್ನ ಜಯಶಾಲಿ ಎಂದು ಘೋಷಣೆ ಮಾಡಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿದು ಬಂದಿದೆ. ಏಷ್ಯಾಕಪ್ ಟೂರ್ನಿಯ ಅಧಿಕಾರಿಗಳಾಗಿರುವ ಅನಿಲ್ ಚೌಧರಿ, ನಿತಿನ್ ಮೆನನ್ ಹಾಗೂ ಶ್ಯಾಮ್‌ಸುದೀನ್ ಈ ಮಾಹಿತಿ ಹೊರಹಾಕಿದ್ದಾರೆ.

ಏಷ್ಯಾಕಪ್ ಉದ್ಘಾಟನಾ ಪಂದ್ಯ

ಲಂಕಾ ವಿರುದ್ಧ ಗೆದ್ದ ಬಾಂಗ್ಲಾ

ದುಬೈ: 14ನೇ ಆವೃತ್ತಿ ಏಷ್ಯಾಕಪ್‌ನ ಉದ್ಘಾಟನಾ ಪಂದ್ಯದಲ್ಲಿ ಶ್ರೀಲಂಕಾ ತಂಡದ ವಿರುದ್ಧ ಭರ್ಜರಿ 137 ರನ್‌ಗಳ ಗೆಲುವು ದಾಖಲು ಮಾಡುವ ಮೂಲಕ ಹಾಲಿ ರನ್ನರ್‌ಅಪ್ ಟೀಂ ಬಾಂಗ್ಲಾದೇಶ ಶುಭಾರಂಭ ಮಾಡಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಬಾಂಗ್ಲಾ ತಂಡ ಮಾರಕ ಬೌಲರ್ ಮಾಲಿಂಗ ಎಸೆದ ಮೊದಲ ಓವರ್‌ನಲ್ಲಿ ಕೇವಲ 2 ರನ್ ಗಳಿಸುವಷ್ಟರಲ್ಲಿ ಪ್ರಮುಖ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಇದರ ನಡುವೆ ಕೂಡ ಮಧ್ಯಮ ಕ್ರಮಾಂಕದ ಆಟಗಾರ ಮುಶ್ಫಿಕರ್ ರಹೀಮ್ ಅವರ ಆಕರ್ಷಕ ಶತಕ (144) ಹಾಗೂ ಮೊಹಮ್ಮದ್ ಅವರ ಜವಾಬ್ದಾರಿಯುತ ಅರ್ಧಶತಕ(63) ನೆರವಿನಿಂದ ತನ್ನೆಲ್ಲ ವಿಕೆಟ್ ಕಳೆದುಕೊಂಡು 49.3 ಓವರ್‌ಗಳಲ್ಲಿ ತಂಡ 261ರನ್?ಗಳಿಸಿತು.

ಲಂಕಾ ಪರ ಲಸಿತ್ ಮಾಲಿಂಗ 4 ವಿಕೆಟ್, ಸಿಲ್ವಾ 2 ವಿಕೆಟ್ ಪಡೆದು–ಕೊಂಡರೆ, ಸುರಂಗ ಲಕ್ಮಲ್, ಪರೆರಾ ಹಾಗೂ ಅಮಿಲಾ ತಲಾ 1 ವಿಕೆಟ್ ಪಡೆದುಕೊಂಡರು.

ಸ್ಪರ್ಧಾತ್ಮಕ 262ರನ್‌ಗಳ ಗುರಿ ಬೆನ್ನತ್ತಿದ್ದ ಲಂಕಾ ತಂಡ ಬಾಂಗ್ಲಾ ತಂಡದ ಬೌಲರ್‌ಗಳ ದಾಳಿಗೆ ತತ್ತರಿಸಿ ಕೇವಲ 124 ರನ್‌ಗಳಿಗೆ ಆಲೌಟ್ ಆಗಿ ಸೋಲು ಕಂಡಿದೆ.

262ರನ್‌ಗಳ ಟಾರ್ಗೆಟ್ ಬೆನ್ನತ್ತಿದ್ದ ಲಂಕಾ ತಂಡ ಆರಂಭದಲ್ಲಿ ಅಘಾತಕ್ಕೊಳಗಾಯಿತು. ಆರಂಭಿಕರಾಗಿ ಕಣಕ್ಕಿಳಿದ ಕುಶಾಲ್ ಮೆಂಡಿಸ್ (0)ಬಲು ಬೇಗನೆ ಪೆವಿಲಿಯನ್ ಸೇರಿಕೊಂಡರು. ಇದರ ಬೆನ್ನಲ್ಲೇ ಬಂದ ಕುಶಾಲ್ ಪೆರೆರಾ(11), ಮತ್ತೋರ್ವ ಆರಂಭಿಕ ಉಪ್ಪಲ್ ತರಂಗಾ(27) ವಿಕೆಟ್ ಒಪ್ಪಿಸಿ ತಂಡವನ್ನ ಸಂಕಷ್ಟಕ್ಕೆ ಸಿಲುಕಿಸಿದರು. ಇದರ ಮಧ್ಯೆ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳಾದ ಧನಂಜಯ ಸಿಲ್ವಾ(0), ನಾಯಕ ಮ್ಯಾಥೂಸ್(16), ಶನಕ(7), ಥಿಸಾರ್ ಪರೆರಾ(6), ಸುರಂಗ ಲಕ್ಮಲ್(20) ವಿಕೆಟ್ ಒಪ್ಪಿಸಿದರು.

ಕೊನೆಯದಾಗಿ ಅಮಿಲಾ(4)ರನ್, ದಿಲರುವಾ ಪೆರೆರಾ(29) ರನ್ ಗಳಿಸಿದರೆ, ಲಸಿತ್ ಮಾಲಿಂಗಾ 3 ರನ್ ಗಳಿಸಿ ಅಜೇಯರಾಗಿ ಉಳಿದರು. ಈ ಮೂಲಕ ಕ್ರಿ–ಕೆಟ್ ಶಿಶು ಬಾಂಗ್ಲಾ, ಬಲಿಷ್ಠ ಶ್ರೀಲಂಕಾ ವಿರುದ್ಧ ಭರ್ಜರಿಯಾಗಿ ಗೆದ್ದು ಬೀಗಿದೆ.

ಮಾಡಿದ ತಪ್ಪು ತಿದ್ದಿಕೊಳ್ಳಲು ಮುಂದಾದ ಶಾಸ್ತ್ರಿ

ನವದೆದಹಲಿ:–ಇಂಗ್ಲೆಂಡ್ ಪ್ರವಾಸದಲ್ಲಿ ಹೀನಾಯ ಸೋಲು ಟೀಮ್ ಇಂಡಿಯಾದ ಕೋಚ್ ರವಿ ಶಾಸ್ತ್ರಿ ಅವರ ನಿದ್ದೆಗೆಡಿಸಿದೆ. ಸೋಲಿನಿಂದ ಟೀಕೆಗಳಿಗೆ ತುತ್ತಾಗಿದ್ದ ರವಿಶಾಸ್ತ್ರಿ, ಕಮ್ ಬ್ಯಾಕ್ ಮಾಡಲು ಪ್ಲಾನ್ ಮಾಡಿಕೊಂಡಿದ್ದಾರೆ.

ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿ ಆರಂಭಕ್ಕೂ ಮುನ್ನ ಏಕೈಕ ಅಭ್ಯಾಸ ಪಂದ್ಯಕ್ಕೆ ಇಲ್ಲ ಸಲ್ಲದ ಕಾರಣ ನೀಡಿದ್ದ ಟೀಂ ಇಂಡಿಯಾ ಹಾಗೂ ಕೋಚ್ ರವಿಶಾಸ್ತ್ರಿ ಇದೀಗ ಎಚ್ಚೆತ್ತು–ಕೊಂಡಿದ್ದಾರೆ. ಮುಂಬರುವ ಆಸ್ಟ್ರೇಲಿಯಾ ಪ್ರವಾಸದ ಮೇಲೆ ದೃಷ್ಟಿ ನೆಟ್ಟಿರುವ ರವಿ ಶಾಸ್ತ್ರಿ, ಆಸ್ಟ್ರೇಲಿಯಾ ಪ್ರವಾಸದಲ್ಲಿ ಅಭ್ಯಾಸ ಪಂದ್ಯ ಆಯೋಜಿಸಬೇಕು ಎಂದು ಬಿಸಿಸಿಐ ಹಾಗೂ ಕ್ರಿಕೆಟ್ ಆಸ್ಟ್ರೇಲಿಯಾಗೆ ಮನವಿ ಮಾಡಿದ್ದರು. ಈ ಮೂಲಕ ತಮ್ಮ ತಪ್ಪನ್ನ ತಿದ್ದಿಕೊಳ್ಳಲು ಮುಂದಾಗಿದ್ದಾರೆ.

ಇನ್ನು ರವಿಶಾಸ್ತ್ರಿ ಅವರ ಮನವಿಗೆ ಕ್ರಿಕೆಟ್ ಆಸ್ಟ್ರೇಲಿಯಾ ಗುಣಾತ್ಮಕ ಉತ್ತರ ನೀಡಿದ್ದು, ಬಿಸಿಸಿಐ ನಿಂದ ಪ್ರವಾಸದ ವೇಳಾ ಪಟ್ಟಿ ಬಂದ ನಂತರ ಅಭ್ಯಾಸ ಪಂದ್ಯದ ನಿರ್ಧಾರ ಕೈಗೊಳ್ಳೋದಾಗಿ ತಿಳಿಸಿದೆ.

ನವಂಬರ್ 21 ರಿಂದ ಜನವರಿ 18ರ ವರೆಗೆ ಟೀಮ್ ಇಂಡಿಯಾ ಆಸ್ಟ್ರೇಲಿಯಾ ನೆಲದಲ್ಲಿ ಬೀಡು ಬಿಡಲಿದೆ. ಈ ವೇಳೆ 3 ಟಿ–20, 4 ಏಕದಿನ ಹಾಗೂ 4 ಟೆಸ್ಟ್ ಪಂದ್ಯ ಆಡಲಿದೆ. ಸದ್ಯ ಟೀಮ್ ಇಂಡಿ–ಯಾ ಏಷ್ಯಾ ಕಪ್ ನಲ್ಲಿ ಅದೃಷ್ಟ ಪರೀಕ್ಷೆ ನಡೆಸಿದೆ. ನೆವೆಂಬರ್‌ನಲ್ಲಿ ಟೀಂ ಇಂಡಿಯಾ ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿದೆ. ಅಲ್ಲಿ ಏಕದಿನ, ಟಿ–20 ಸೇರಿ ಟೆಸ್ಟ್ ಪಂದ್ಯಗಳನ್ನ ಆಡಲಿದೆ. ಟಿ–20 ಬಳಿಕ ಟೆಸ್ಟ್ ಸರಣಿಗೆ ಕೇವಲ 10 ದಿನಗಳ ಕಾಲಾವಕಾಶವಿದೆ. ಇದು ಟೆಸ್ಟ್ ಸರಣಿಗೆ ಅಭ್ಯಾಸ ನಡೆಸಲು ಸಾಕಾಗುವುದಿಲ್ಲ ಎಂದು ಭಾರತ ತಂಡದ ಕೋಚ್ ರವಿಶಾಸ್ತ್ರಿ ಹೇಳಿದ್ದಾರೆ. ಟೆಸ್ಟ್ ಸರಣಿಗೆ ಮುನ್ನ ಹೆಚ್ಚು ಹೆಚ್ಚು ಅಭ್ಯಾಸ ಪಂದ್ಯಗಳ ಅವಶ್ಯಕತೆ ಇದೆ. ಇದಕ್ಕಾಗಿ ಬಿಸಿಸಿಐ ಗಮನಹರಿಸಬೇಕಿದೆ. ಅಷ್ಟೇ ಅಲ್ಲ ಆಸ್ಟ್ರೇಲಿಯಾ ಸರಣಿಗೂ ಮುನ್ನ ಹೆಚ್ಚಿನ ಅಭ್ಯಾಸ ಪಂದ್ಯಗಳಿಗೆ ಅವಕಾಶ ನೀಡಬೇಕು ಎಂದು ರವಿ ಶಾಸ್ತ್ರಿ ಬೇಡಿಕೆ ಸಲ್ಲಿಸಿದ್ದಾರೆ. ಇಂಗ್ಲೆಂಡ್‌ನಲ್ಲಿ ಏಕದಿನ ಸರಣಿ ಬಳಿಕ ಟೆಸ್ಟ್ ಪಂದ್ಯಕ್ಕೂ ಆರಂಭಕ್ಕೂ ಮುನ್ನ ಎಕ್ಸೆಸ್ ವಿರುದ್ಧ ಮೂರು ನಾಲ್ಕುದಿನಗಳ ಅಭ್ಯಾಸ ಪಂದ್ಯ ನಡೆಸಿದವು. ಮಳೆಯಿಂದಾಗಿ ಅದು ಮೂರೇ ದಿನಕ್ಕೆ ಮೊಟಕುಗೊಂಡಿತು. ಹೀಗಾಗಿ ತಂಡ–ಕ್ಕೆ ಅಭ್ಯಾಸ ನಡೆಸಲು ಸಾಧ್ಯವೇ ಆಗಲಿಲ್ಲ ಎಂದು ಸಮಜಾಯಿಸಿ ನೀಡಿದ್ದಾರೆ ರವಿ ಶಾಸ್ತ್ರಿ.

ವ್ಯಸನ ಮುಕ್ತಿ ಹಾಗೂ ಲೈಂಗಿಕ ಸಮಸ್ಯೆ

ಶೀಘ್ರಸ್ಖಲನ, ನಪುಸಂಕತೆ, ಹಸ್ತಮೈಥುನ, ಅಶಕ್ತತೆ, ಸಿಗರೇಟು, ತಂಬಾಕು, ದಾರು ಬಿಡಿಸುವ ಮಾತ್ರೆ ಸಿಗುತ್ತವೆ. ಅವಶ್ಯಕತೆ ಅನುಸಾರ ರೋಗಿಗಳನ್ನು ದಾಖಲಿಸಿ ಕೊಳ್ಳಲಾಗುವುದು.

ನಿರ್ಮಲ ಹಾಸ್ಪಿಟಲ್ ವ್ಯಸನ ಮುಕ್ತಿ ಕೇಂದ್ರ
ರೈಲ್ವೆ ಸ್ಟೇಶನ ಹತ್ತಿರ ಮಿರಜ ಜಿ:ಸಾಂಗಲಿ (ಮಹಾರಾಷ್ಟ್ರ)
ಫೋನ: 0233-2225060, 09922646566
ಭೇಟಿ: ವೇಳೆ: 11 ರಿಂದ 06

ಚಿಕ್ಕೋಡಿ : ವಿಜಯಾ ಬ್ಯಾಂಕ ಹತ್ತಿರ, ಶನಿವಾರ ದಿ. 15 ಸಪ್ಟೆಂಬರ್ ವೇಳೆ: 10 ರಿಂದ 1 ಗಂಟೆ.
ಜಮಖಂಡಿ : ಮು.ಹೋ: ಹೊನ್ನುರ ಬಸ್ ಸ್ಟ್ಯಾಂಡ್ ಹತ್ತಿರ ಕೆನರಾ ಬ್ಯಾಂಕ ಬಿಲ್ಡಿಂಗ್ ರವಿವಾರ ದಿ. 16 ಸಪ್ಟೆಂಬರ್ ವೇಳೆ: 10 ರಿಂದ 2 ಗಂಟೆ.
ಅಥಣಿ : ಸೋನಂ ಇ.ಎನ್.ಟಿ. ಕ್ಲಿನಿಕ್ ಡಾ. ಈರಪ ಮೊದಲನೇಯ ಮಹಡಿ ನಿಸರ್ಗಾ ಹೋಟೆಲ್ ಎದುರುಗಡೆಹಲ್ಯಾಳ ರೋಡ. ಅಥಣಿ ರವಿವಾರ ದಿ. 16 ಸಪ್ಟೆಂಬರ್ ವೇಳೆ: 3 ರಿಂದ 6 ಗಂಟೆ.

ಅಭಿಮಾನಿಗಳ ನೂಕುನುಗ್ಗಲಿನ ನಡುವೆ ಸಿಲುಕಿಕೊಂಡ ನಟ

ಸ್ಟಾರ್ ನಟ ವಿಜಯ್, ಮದುವೆ ಸಮಾರಂಭದಲ್ಲಿ ಭಾಗಿಯಾದ ವೇಳೆ, ನೂಕು ನುಗ್ಗಲು ಸಂಭವಿಸಿದೆ. ಖ್ಯಾತ ನಟನನ್ನು ನೋಡಲು ಅಭಿಮಾನಿಗಳು ಮುಗಿಬಿದ್ದ ಪರಿಣಾಮ ವಿಜಯ್ ಗೆ ಗಾಯವಾಗಿದೆ.

ಮಾಜಿ ಶಾಸಕರೊಬ್ಬರ ಮದುವೆ ಸಮಾರಂಭಕ್ಕೆ ವಿಜಯ್ ಭೇಟಿ ನೀಡಿದ್ದರು. ವಿಜಯ್ ಬಂದಿರುವ ಸುದ್ದಿ ಅಭಿಮಾನಿಗಳಿಗೆ ಗೊತ್ತಾಗುತ್ತಿದ್ದಂತೆ ನೆಚ್ಚಿನ ನಟನನ್ನು ನೋಡಲು ಧಾವಿಸಿ ಬಂದಿದ್ದಾರೆ.

ಭಾರೀ ಜನ ಸಮೂಹವನ್ನು ತಡೆಯುವಲ್ಲಿ ಭದ್ರತಾ ಸಿಬ್ಬಂದಿ ಸಹ ವಿಫಲರಾದ್ರು. ಈ ವೇಳೆ ಅಲ್ಲದೆ ವಿಜಯ್ ಅವರ ಕಾಲಿಗೆ ತಳ್ಳಾಟ ನಡೆದ ಬಗ್ಗೆ ವರದಿ ಆಗಿದೆ. ಗಾಯವಾದ ಬಗ್ಗೆ ತಿಳಿದು ಬಂದಿದೆ.

ಸ್ಟಾರ್ ನಟನನ್